

## ಹೀರೆಕಾಯಿ ಚಾಪ್ಸ್

ಏನೇನು ಬೇಕು?

ಗುಂಡಗೆ ಹಚ್ಚಿದ ಹೀರೆಕಾಯಿ ಗಾಲಿಗಳು ಒಂದು ಬಟ್ಟಲು

ಹೆಚ್ಚಿದ ಈರುಳ್ಳಿ ಒಂದು ಬಟ್ಟಲು

ಹಚ್ಚಿದ ಹಸಿಮೆಣಸಿನಕಾಯಿ ಮೂರು / ತೆಂಗಿನತುರಿ ಒಂದು ಹಿಡಿ

ಲವಂಗ, ಚಕ್ಕೆ, ಶುಂಠಿ ಸ್ವಲ್ಪ ಅರಿಸಿನ, ಜೀರಿಗೆ ಅರ್ಧ ಚಮಚ

ಉಪ್ಪು ರುಚಿಗೆ

ಮಾಡೋದು ಹೇಗೆ?

ಬಾಣಲೆಗೆ ಎಣ್ಣೆ ಹಾಕದೆ ಈರುಳ್ಳಿ ಮೆಣಸಿನಕಾಯಿ, ಶುಂಠಿ, ತೆಂಗಿನ ತುರಿ, ಚಕ್ಕೆ, ಮೊಗ್ಗು ಲವಂಗ ಅರಿಸಿನ ಜೀರಿಗೆ ಹಾಕಿ ಹಸಿವಾಸನೆ ಹೋಗುವಂತೆ ಹುರಿದು ರುಬ್ಬಿಕೊಳ್ಳಿ. ಈಗ ಬಾಣಲೆಗೆ ಎರಡು ಚಮಚಎಣ್ಣೆ ಹಾಕಿ ಸ್ವಲ್ಪ ಈರುಳ್ಳಿ ಕರಿಬೇವು ಹಾಕಿ ಹುರಿದು ರುಬ್ಬಿದ ಮಸಾಲೆ ಸೇರಿಸಿ ಘಮ್ ಎನ್ನುವಂತೆ ಹುರಿದು ಹೀರೆಕಾಯಿ ಹೋಳುಗಳನ್ನು ಹಾಕಿ ಹುರಿದು ಹಸಿವಾಸನೆ ಹೋದಾಗ ಉಪ್ಪು ಸೇರಿಸಿ ಕೊತ್ತಂಬರಿ ಸೊಪ್ಪಿನಿಂದ ಅಲಂಕರಿಸಿ.



## ಪನ್ನೀರ್ ಪಾಯಸ

ಏನೇನು ಬೇಕು?

ಹಾಲು ಅರ್ಧ ಲೀಟರ್ / ಪನ್ನೀರ್ ಅರ್ಧ ಬಟ್ಟಲು

ಕಂಡೆನ್ಸ್ ಮಿಲ್ಕ್ ಒಂದು ಬಟ್ಟಲು/ ತುಪ್ಪ ನಾಲ್ಕು ಚಮಚ

ತುಪ್ಪದಲ್ಲಿ ಕರಿದ ದ್ರಾಕ್ಷಿ, ಪಿಸ್ತಾ, ಗೋಡಂಬಿ, ಏಲಕ್ಕಿ ಪುಡಿ ಅರ್ಧ ಚಮಚ

ಮಾಡೋದು ಹೇಗೆ?

ಹಾಲನ್ನು ಕಾಯಿಸಿ ಇಳಿಸಿ. ಇದಕ್ಕೆ ಕಂಡೆನ್ಸ್ ಮಿಲ್ಕ್ ಸೇರಿಸಿ ಬೆರೆಸಿ ತುಪ್ಪ ಹಾಕಿ. ಪನ್ನೀರನ್ನು ಪುಡಿ ಮಾಡಿ ಚೆನ್ನಾಗಿ ಬೆರೆಸಿ ಏಲಕ್ಕಿ ಪುಡಿ ದ್ರಾಕ್ಷಿ ಪಿಸ್ತಾ ಗೋಡಂಬಿ ಸೇರಿಸಿ. ಬಿಸಿಯಾಗಿ ಅಥವಾ ತಂಪುಗೊಳಿಸಿ ಸವಿಯಿರಿ.


ಬೆಲೆ ರೂ. 20 ಮಾತ್ರ

ವರ್ಷದ ಸಮಗ್ರ ಮಾರ್ಗದರ್ಶಿ




2017




ದಿನದರ್ಶಿಕೆ ಮಾರುಕಟ್ಟೆಯಲ್ಲಿ ಲಭ್ಯ

ನಿಮ್ಮ ದಿನ ಗುರುತು ಹಚ್ಚಲು ದಾರಿದೀಪ

- ವಿವಿಧ ರಜೆಗಳು
- ಮಳೆ ನಕ್ಷತ್ರಗಳು
- ಹುಣ್ಣಿಮೆ, ಅಮಾವಾಸ್ಯೆ, ಸಂಕಷ್ಟ ಚತುರ್ಥಿ ಸೂಚಿ
- ರಾಜ್ಯದ ಪ್ರಮುಖ ಉತ್ಸವಗಳು, ಜಾತ್ರೆಗಳು
- ಪ್ರಮುಖರ ಪುಣ್ಯದಿನಗಳು
- ತಿಥಿ, ವಾರ, ಸಂವತ್ಸರ, ನಕ್ಷತ್ರದ ಸ್ಪಷ್ಟ ಸೂಚನೆ

ಪ್ರತಿಗಳಿಗಾಗಿ ನಿಮ್ಮ ನ್ಯೂಸ್ ಏಜೆಂಟರು, ಪುಸ್ತಕದ ಅಂಗಡಿಗಳು ಅಥವಾ ನಮ್ಮ ಕಚೇರಿಗಳು:

ದಿ ಪ್ರಿಂಟರ್ಸ್(ಮೈಸೂರು) ಪ್ರೈ.ಲಿ., 75, ಎಂ.ಜಿ. ರಸ್ತೆ, ಬೆಂಗಳೂರು-560 001. ದೂರವಾಣಿ: 25880199/202/219/225.

ಶಾಖೆಗಳು: ನಗರ ಕಚೇರಿ: ಕೆ.ಜಿ. ರಸ್ತೆ: 25880209. ದಾವಣಗೆರೆ: 230846. ಮೈಸೂರು: 2420532/2420129. ಹುಬ್ಬಳ್ಳಿ: 2277535/2372081. ಮಂಗಳೂರು: 2215852/2218334. ಕಲ್ಬುರ್ಗಿ: 255539/ 221808 ಸಂಪರ್ಕಿಸಿ